# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಮಾಗಡಿ
## ಕ್ರಿಮಿನಲ್ ಪ್ರಕರಣ ಸಂಖ್ಯೆ: 4494 / 2023

ಚಾಸಾ :- 1/ಪ್ರಾಸಾ :1

| | | |
|---|---|---|
| ಹೆಸರು | : | ದೇವರಾಜು ಕೆ ಬಿ |
| ತಂದೆ ಹೆಸರು | : | ಬಸವಯ್ಯ |
| ವಯಸ್ಸು | : | 45 |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಕಲ್ಯಾ |

**ದಿನಾಂಕ: 21.06.2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣವಚನ ಬೊಧಿಸಲಾಯಿತು .**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರವರಿಂದ**

ದಿನಾಂಕ 03.04.2023 ರಂದು ನಮ್ಮ ಅಣ್ಣ ಯೋಗೇಶ್ ರವರು ತಮ್ಮ ಮಗಳು ಹೇಮಶ್ರೀ ಯನ್ನು ವೆಂಕಟ್ ಇಂಟರ್ ನ್ಯಾಷನಲ್ ಶಾಲೆಗೆ ಬಿಡಲು ಹೋಗಿದ್ದರು ಆಗ ನನಗೆ ಸುಮಾರು 9.15 ಗಂಟೆಗೆ ಅಕ್ಕ ಪಕ್ಕದವರು ಪೋನ್ ಮಾಡಿ ನಿಮ್ಮ ಅಣ್ಣ ನವರಿಗೆ ಅಪಘಾತವಾಗಿರುತ್ತದೆ ಬೇಗ ಬನ್ನಿ ಎಂದು ತಿಳಿಸಿದರು. ಆಗ ನಾನು ತೋಟದಿಂದ ಯಾರದೋಬೈಕ್ ಅನ್ನು ಪಡೆದು 10 ನಿಮಿಷದಲ್ಲಿ ಸ್ಥಳಕ್ಕೆ ಬಂದಿರುತ್ತೇನೆ. ನಾನು ಬಂದು ನೋಡಿದಾಗ ಸ್ಥಳದಲ್ಲೆ ನನ್ನ ಅಣ್ಣ ಮೃತಪಟ್ಟಿದ್ದನು. ಮಗಿಗೆ ಸ್ವಲ್ಪ ಜೀವ ಇದೆ ಎಂದು ಅಲ್ಲಿದ್ದ ಸ್ಥಳೀಯರು ಹೇಳುತ್ತಿದ್ದರು. ಆಗ ಆಂಬುಲೆನ್ಸ್ ಗೆ ಕಾಲ್ ಮಾಡಿರುತ್ತೇವೆ ಆದ ರೆ ಆಂಬುಲೆನ್ಸ್ ಬಂದಿರುವುದಿಲ್ಲ. ಅಲ್ಲೆ ಇದ್ದ ಯಾವುದೋ ಒಂದು ವಾಹನದಲ್ಲಿ ಹಾಕಿಕೊಂಡು ಕಲ್ಯಾ ಗೇಟ್ ಗೆ ಬಂದಿರುತ್ತೇವೆ. ಅಲ್ಲಿ ಹೇಮಶ್ರೀ ಯವರು ಮರಣ ಹೊಂದಿರುತ್ತಾರೆ. ನಂತರ ಸರ್ಕಾರಿ ಆಸ್ಪತ್ರೆಗೆ ಬಂದಾಗ ವೈದ್ಯಾಧಿಕಾರಿಗಳು ಜೀವ ಹೋಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ಸದರಿ ನನ್ನ ಅಣ್ಣ ಯೋಗೇಶ್ ರವರ ಮೃತ ದೇಹವನ್ನು ಆಸ್ಪತ್ರೆಗೆ ತಂದಿರುತ್ತಾರೆ. ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ಮಹಜರ್ ಜರುಗಿಸಿರುತ್ತಾರೆ. ನಾನು ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸದರಿ ಯೋಗೇಶ್ ರವರ ವಾಹನವು ಜುಪಿಟರ್ ಆಕ್ಟಿವ್ ಹೋಂಡಾ ನಂ. ಕೆಎ 05-ಕೆ ಎನ್ 2350 ಹಾಗೂ ಅಪಘಾತ ಪಡಿಸಿದ ವಾಹನ ಹೊಂಡೈ ವರ್ಣ ಇದ್ದು ಅದರ ನಂಬರ್ ಕೆಎ 20-ಎಂ ಬಿ /5142 ಇರುತ್ತದೆ. ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ- 1(ಎ) ಎಂದು ಗುರುತಿಸಲಾಯಿತು.

KBದೇವರಾಜು

Scanned with OKEN Scanner

ನಂತರ ಪೋಲಿಸರು ಮಧ್ಯಾಹ್ನ 2.30 ರಿಂದ 3.00 ಗಂಟೆ ಸಮಯದಲ್ಲಿ ಮಹಜರ್ ಗಾಗಿ ಅಪಘಾತ ಸ್ಥಳಕ್ಕೆ ಬಂದಿರುತ್ತಾರೆ. ಆ ಸಮಯದಲ್ಲಿ ಚಾಸಾ 2 ರಿಂದ 4 ರವರು ಹಾಜರು ಇದ್ದರು. ಸದರಿ ಮಹಜರ್ ಸಮಯದಲ್ಲಿ ಬೈಕ್ ಎಷ್ಟು ದೂರದಲ್ಲಿ ಬಿದ್ದಿರುತ್ತದೆ ಹಾಗೂ ದೇಹವು ಎಷ್ಟು ದೂರದಲ್ಲಿ ಬಿದ್ದಿರುತ್ತದೆ ಎಂದು ಬರೆದುಕೊಂಡಿರುತ್ತಾರೆ. ಸದರಿ ದ್ವಿಚಕ್ರ ವಾಹನ ಮತ್ತು ವರ್ಣ ವಾಹನವನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ಮಹಜರಿ ಗೆ ನಾನು ಸಹಿ ಮಾಡಿರುತ್ತೇನೆ. ಈಗ ಸಾಕ್ಷಿಗೆ ಕೃತ್ಯ ಸ್ಥಳದ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಮಹಜರನುನ ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ- 2(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಪೋಟೋಗಳನ್ನು ನಿಪಿ-03 , ನಿಪಿ-04 ಮತ್ತು ನಿಪಿ-05 ಎಂದು ಗುರುತಿಸಲಾಯಿತು. ಅಪಘಾತವು ಸದರಿ ವರ್ಣ ಕಾರಿನ ಚಾಲಕನಿಂದ ಆಗಿರುತ್ತದೆ.

**ಪಾಟೀಸವಾಲು:: ಶ್ರೀ ಎನ್ ಆರ್ ಎಸ್ ವಕೀಲರಿಂದ 1 ನೇ ಆರೋಪಿಯ ಪರವಾಗಿಃ**

ಘಟನೆ ಬಗ್ಗೆ ಯಾರು ಪೋನ್ ಮಾಡಿ ತಿಳಿಸಿರುತ್ತಾರೆ ಎಂದು ಹೇಳಿದ್ದು ಅವರ ಹೆಸರನ್ನು ದೂರಿನಲ್ಲಿ ಬರೆದಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿಯವರು ಹೆಸರು ಏನು ಎಂದರೆ ಸಾಕ್ಷಿಯ ಸಂಗಮೇಶ್ ಎಂದು ನುಡಿಯುತ್ತಾರೆ. ಸದರಿ ಸಂಗಮೇಶ್ ರವರು ಏನು ಹೇಳಿರುತ್ತಾರೋ ಅದರ ಆಧಾರದ ಮೇಲೆ ದೂರು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ ಸದರಿ ಮಹಜರ್ ಗೆ ಸಹಿಯನ್ನು ಪೋಲಿಸ್ ಠಾಣೆಯಲ್ಲಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ಪೋಲಿಸರು ಏನು ಬರೆದುಕೊಂಡಿರುತ್ತಾರೋ ಅದಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಘಟನೆಯ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ವಿಮಾ ಪರಿಹಾರ ಹಣವನ್ನು ಪಡೆಯುವ ಸಲುವಾಗಿ ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಪಾಟೀಸವಾಲು:: 2 ನೇ ಆರೋಪಿ ಪರ ಶ್ರೀ ಎಂ ಪಿ ವಕೀಲರಿಂದಃ**

2ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ, ಹೇ, ಕೇ, ಸ , ಇ , ಎ ಒಪ್ಪಿ ರುತ್ತಾರೆ,**

KBN...

2/6.

**ಪ್ರ ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. , ಮಾಗಡಿ**

Scanned with OKEN Scanner

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆಃ 4494 / 2023**

ಚಾಸಾ ಃ- 4/ಪ್ರಾಸಾ ಃ2

| | |
|---|---|
| ಹೆಸರು | : ಯೋಗೇಶ್ |
| ತಂದೆ ಹೆಸರು | : ನರಸಿಂಹಮೂರ್ತಿ |
| ವಯಸ್ಸು | : 35 |
| ಉದ್ಯೋಗ | : ಖಾಸಗಿ ಕೆಲಸ |
| ವಿಳಾಸ | : ಕಲ್ಯಾ |

**ದಿನಾಂಕಃ 21.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೊಧಿಸಲಾಯಿತು .**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರವರಿಂದ**

ಚಾಸಾ 1 ಮತ್ತು 5 ರವರು ಪರಿಚಯ ಇರುತ್ತಾರೆ. ದಿನಾಂಕ 03.04.2023 ರಂದು ಮಧ್ಯಾಹ್ನ 2.00 ರಿಂದ 2.30 ರ ಸಮಯದಲ್ಲಿ ಪೋಲಿಸರು ಅಪಘಾತ ಸಂಬಂಧ ವೆಂಕಟ್ ಶಾಲೆ ಬಳಿ ಮಹಜರನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ 1 ಮತ್ತು ಚಾಸಾ 5 ರವರು ಇದ್ದೆವು. ಕೆಎ-20 ಎಂ ಬಿ 5142 ವರ್ಣ ಕಾರು ಮತ್ತು ಕೆಎ 05- ಕೆಎನ್ 2350 ದ್ವಿಚಕ್ರ ವಾಹನವನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಈಗ ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಸಮಯದಲ್ಲಿ ಪೋಟೋ ತೆಗೆಯಲಾಯಿತು. ಈಗ ಸಾಕ್ಷಿಗೆ ನಿಪಿ-3 ರಿಂದ 5 ಅನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಶ್ರೀ ಎನ್ ಆರ್ ಎಸ್ ವಕೀಲರಿಂದ 1 ನೇ ಆರೋಪಿಯ ಪರವಾಗಿಃ**

ಸ್ಥಳ ಮಹಜರ್ ಜರುಗಿಸಲು ನಿಮಗೆ ಪೋಲಿಸರು ನೋಟೀಸ್ ಏನಾದರೂ ಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಏನು ಬರೆದುಕೊಂಡಿರುತ್ತಾರೋ ಅದಕ್ಕೆ ಸಹಿ ಹಾಕಲು ಹೇಳಿದ್ದರಿಂದ ನೀವು ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಹಿಯನ್ನು ಆಸ್ಪತ್ರೆ ಹತ್ತಿರ ಹಾಕಿಸಿರುತ್ತಾರೋ ಅಥವಾ ಪೋಲಿಸ್ ಠಾಣೆಯಲ್ಲಿ ಹಾಕಿಸಿರುತ್ತಾರೋ ಎಂದರೆ ಸಾಕ್ಷಿ ಮಹಜರ್ ಸ್ಥಳದಲ್ಲಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಯಾವುದೇ ಸ್ಥಳಕ್ಕೆ ಹೋಗಿದ್ದಿರಲಿಲ್ಲ ಹಾಗೂ ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ

Yogesha K.N.

21/6.

Scanned with OKEN Scanner

ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮೃತ ಯೋಗೇಶ್ ರವರ ಕುಟುಂಬಕ್ಕೆ ಪರಿಹಾರ ಕೊಡಿಸಲು ಸುಳ್ಳು ಮಹಜರನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿ ಮ್ಮ ಸಮಕ್ಷಮ ಯಾವುದೇ ವಾಹನವನ್ನು ಜಪ್ತಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಪಾಟೀಸವಾಲು:: 2 ನೇ ಆರೋಪಿ ಪರ ಶ್ರೀ ಎಂ ಪಿ ವಕೀಲರಿಂದಃ**

2ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ, ಹೇ, ಕೇ, ಸ , ಇ , ಎ ಒಪ್ಪಿರುತ್ತಾರೆ,**

Bhagyashree K.N.

**ಪ್ರ, ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. , ಮಾಗಡಿ**